Construction of Irrigation Tract Road in Bhadra Project Area

892. Sri N. G. HALAPPA (Channagiri).—

Will the Chief Minister be pleased to state :—

(*a*) whether they have received any proposal for construction of Irrigation tract roads in Bhadra Project area ;

(*b*) if so, the action taken by the Government ?

Sri VEERENDRA PATIL (Chief Minister).—

(*a*) Yes.

(*b*) The proposal is under consideration of Government.

Notices of Question of Privilege

(i) *re* : Comments upon the members of Mysore Legislature by the Chief Minister, Andhra Pradesh.

† ಶ್ರೀ ಹೆಚ್. ಎನ್. ನಂಜೇಗೌಡ (ಅರಕಲಗೂಡು).—ಸ್ವಾಮಿ, ನಾನು ತಮ್ಮ ಕಡೆಗೆ ಒಂದು ಪ್ರಿವಿಲೇಜು ಮೋಷನ್ ಕಳುಹಿಸಿಕೊಟ್ಟಿದ್ದೆ. ಅದು ಶನಿವಾರ ನಡೆದಿರತಕ್ಕದ್ದು. ಶನಿವಾರದ ದಿನ ಆಂಧ್ರದ ಮುಖ್ಯ ಮಂತ್ರಿಗಳಾದ ಶ್ರೀ ಬ್ರಹ್ಮಾನಂದ ರೆಡ್ಡಿಯವರು ಅಲ್ಲಿ ನಡೆಯುತ್ತಿರುವ ವಿಧಾನ ಸಭೆಯಲ್ಲಿ ನಾವು ಈ ಸಭೆಯಲ್ಲಿ ನಡೆಸತಕ್ಕ ಕಾರ್ಯಕಲಾಪಗಳ ಬಗ್ಗೆ ಮತ್ತು ಇಲ್ಲಿನ ಸದಸ್ಯರ ಬಗ್ಗೆ ಅನುಚಿತವಾದ ಹಾಗೂ ಅನಗತ್ಯವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ; ಮತ್ತು ನಮ್ಮ ಸದಸ್ಯರ ಹಕ್ಕಿಗೂ ಚ್ಯುತಿ ತಂದಿದ್ದಾರೆ. ಪತ್ರಿಕೆಗಳಲ್ಲಿ ವರದಿಯಾಗಿರುವ ಪ್ರಕಾರ ನ್ಯಾಯಬಾಹಿರವಾದ ಆಪಾದನೆಗಳನ್ನು ಮೈಸೂರು ವಿಧಾನ ಸಭಾ ಸದಸ್ಯರ ಮೇಲೆ ಮಾಡಿದ್ದಾರೆ. ನಾವು ಸಭೆಯಲ್ಲಿ ಇಲ್ಲಿ ಬಂದು ಪ್ರಮಾಣ ವಚನ ಸ್ವೀಕರಿಸುವಾಗ ಸತ್ಯ ಸಂಗತಿಗಳನ್ನೇ ಇಲ್ಲಿ ಹೇಳುತ್ತೇವೆ ಎಂದು ಪ್ರಮಾಣ ವಚನವನ್ನು ಕೈಗೊಂಡಿದ್ದೇವೆ. ಅದರಂತೆ ಸತ್ಯ ಸಂಗತಿಗಳನ್ನೇ ಇಲ್ಲಿ ಹೇಳುತ್ತೇವೆ. ಮಾನ್ಯ ಸದಸ್ಯರು ಅಲ್ಲಿ ನ್ಯಾಯಬಾಹಿರವಾದ ಮಾತುಗಳನ್ನು ಹೇಳಿದ್ದಾರೆ ಎಂದು ಹೇಳುವುದು ಇಲ್ಲಿನ ಮಾನ್ಯ ಸಭೆಗೆ ಹಾಗೂ ಇಲ್ಲಿನ ಸದಸ್ಯರುಗಳ ಹಕ್ಕಿಗೆ ಚ್ಯುತಿ ತಂದಿದ್ದಾರೆ. ಅವರಿಗೆ ಶ್ರೀ ಕೆ. ಎಲ್. ರಾವ್‌ರವರು ಮುಖಂಡರಾಗಿರಬಹುದು ಮಾನ್ಯ ಬ್ರಹ್ಮಾನಂದ ರೆಡ್ಡಿಯವರು ಬೇಕಾದಷ್ಟು ಅವರನ್ನು ಹೊಗಳಲಿ. ಅದರ ಬಗ್ಗೆ ಹೇಳುತ್ತಿಲ್ಲ. ಅವರನ್ನು ಸ್ವರ್ಗ ಲೋಕದಿಂದ ಬಂದವರು ಎಂದು ಬೇಕಾದರೂ ಹೇಳಿಕೊಳ್ಳಲಿ ಅದು ಅಭಿಪ್ರಾಯ ಭೇದಗಳಾದವು. ಆದರೆ ಅವರು ಬೇರೆ ರಾಜ್ಯದ ಮುಖ್ಯ ಮಂತ್ರಿಗಳಾಗಿರಬಹುದು. ಶ್ರೀ ಬ್ರಹ್ಮಾನಂದ ರೆಡ್ಡಿಯವರು ಇಲ್ಲಿ ನಾವು ಕೆ. ಎಲ್. ರಾವ್‌ರ ಬಗ್ಗೆ ನಾವು ಮಾಡಿರತಕ್ಕ ಟೀಕೆಗಳು ನ್ಯಾಯಬಾಹಿರವಾದವು ಎಂದು ಹೇಳಲು ಶ್ರೀ ಬ್ರಹ್ಮಾನಂದ ರೆಡ್ಡಿಯವರಿಗೆ ಹಕ್ಕಿಲ್ಲ. ಇದು ನಮ್ಮ ಹಕ್ಕಿಗೆ ಚ್ಯುತಿ ತಂದಿರುವ ಪ್ರಶ್ನೆ. ರಾಜ್ಯಾಂಗಬದ್ಧವಾಗಿ ಇಲ್ಲಿ ಒಂದು ಮಾತು ಹೇಳಬೇಕು. ಶ್ರೀ ಕೆ. ಎಲ್. ರಾವ್‌ರವರು ಆಂಧ್ರ ಸರಕಾರಕ್ಕೆ ಅಲ್ಲಿ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗಿರುವುದು. ಅವರು ಇಡೀ ದೇಶಕ್ಕೆ ಒಬ್ಬರು ಮಂತ್ರಿಗಳಾಗಿ ಕೇಂದ್ರ ಸರಕಾರದಲ್ಲಿ ಇರುವಾಗ ಅವರೇ ಹತ್ತಾರು ವರ್ಷಗಳಿಂದ ಸರಕಾರದ ಪತಿಯಿಂದ ಸತ್ಯ ಸಂಗತಿಗಳನ್ನು ಹೇಳಬೇಕು ಎನ್ನುವುದರಲ್ಲಿ ಬೇರೆ ವಿಧವಾದ ಟೀಕೆಗಳು ಮಾಡಿದ್ದಾರೆ ಎನ್ನುವುದೆಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿದೆ ಮತ್ತು ಈ ಸಭೆಯಲ್ಲಿ ಪ್ರಸ್ತಾಪ ಮಾಡಿರತಕ್ಕದ್ದೂ ವರದಿಯಾಗಿದೆ. ಆ ವರದಿಗಳು ನಿಜವಾಗಿದ್ದರೆ ಅದರಿಂದ ನಮ್ಮ ಹಕ್ಕಿಗೆ ಚ್ಯುತಿ ಬಂದಂತಾಗುತ್ತದೆ. ಆದುದರಿಂದ ತಾವು ಇದರ ಸಂಬಂಧವಾದ ಕಾರ್ಯಕಲಾಪಗಳು ಅಲ್ಲಿ ಏನು ನಡೆದಿವೆ ಅದನ್ನು ಆ ಸರಕಾರದ ಮೂಲಕ ವರದಿ ತರಿಸಿಕೊಂಡು ತೀರ್ಮಾನ ಕೊಡುತ್ತೀರಾ ಅಥವಾ ಬೇರೆ ಏಜನ್ಸಿ ಮೂಲಕ ವರದಿ ತರಿಸಿ ತಮ್ಮ ತೀರ್ಮಾನ ಕೊಡುತ್ತೀರಾ ?